# ಹಬ್ಬದ ಬೆಳಕಿಗೆ ವಜ್ರದ ಒಡವೆ ಮಿಂಚು!



ವಜ್ರದ ಒಡವೆ ತೊಡುವ ಆಸೆ ಎಲ್ಲ ಮಹಿಳೆಯರಿಗೂ ಇದ್ದದ್ದೇ. ಕಣ್ಣು ಕೋರೈಸುವ ಬಿಳಿ ಹರಳುಗಳಿಂದ ಕೂಡಿದ ವಜ್ರಕ್ಕೆ ಎಲ್ಲಿಲ್ಲದ ಆಕರ್ಷಣೆ. ಇದೀಗ ವಜ್ರದಲ್ಲಿ ಬಣ್ಣ ಬಣ್ಣದ ಹರಳುಗಳಿಂದ ಕೂಡಿದ ಆಭರಣ ಬಂದಿದೆ. ಬೆಲೆಯೂ ಕೈಗೆಟುಕುವಂತಿದ್ದು, ದೀಪಾವಳಿ ಹಬ್ಬದ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡಲಿದೆ.

■ **ಅವನೀಶ್**

ಸಿರಿವಂತರ ಕಣ್ಣು ಯಾವತ್ತೂ ದುಬಾರಿ ವಜ್ರ, ಚಿನ್ನ, ಪ್ಲಾಟಿನಂ ಒಡವೆಗಳ ಮೇಲೆಯೇ. ಮಿರಿ ಮಿರಿ ಮಿಂಚುವ ಜರತಾರಿ ಸೀರೆ ಉಟ್ಟಾಗ ಅದಕ್ಕೊಪ್ಪುವ ಬಣ್ಣದ್ದೇ ಒಡವೆ ತೊಡದಿದ್ದರೆ ಹೇಗೆ..? ಸೀರೆಗೆ ಮ್ಯಾಚಿಂಗ್ ಮಾಡಿಕೊಳ್ಳುವ ಮನಸ್ಸಿದ್ದರೂ ಬಣ್ಣ ಬಣ್ಣದ ರೂಬಿ, ಎಮರಾಲ್ಡ್, ನೀಲ, ಪಚ್ಚೆ ಬಣ್ಣಗಳ ದುಬಾರಿ ಹರಳುಗಳ ಒಡವೆಗಳಲ್ಲಿ ತರಾವರಿ ವಿನ್ಯಾಸದ್ದು ಲಭ್ಯವಿದ್ದರೂ ಅದೇಕೋ ವಜ್ರದ ಒಡವೆ ಮೇಲೆಯೇ ಎಲ್ಲಿಲ್ಲದ ಮೋಹ. ಈ ಸಿರಿವಂತಿಕೆಯ, ಮೇಲ್ವರ್ಗದ ಮಹಿಳೆಯರ ಮನದಾಸೆ ತಣಿಸಲೆಂದೇ ಇದೀಗ ಹೊಸದಾಗಿ ಬಣ್ಣದ ವಜ್ರದ ಒಡವೆ (ಕಲರ್ ಡೈಮಂಡ್ಸ್) ಆಭರಣಗಳು ಬಂದಿವೆ.

ಬಿಳಿ, ಹಳದಿ ವಜ್ರದ ಹರಳುಗಳಿರುವ ಒಡವೆ ವಿನ್ಯಾಸ ಆಭರಣ ಪ್ರಪಂಚದಲ್ಲಿ ಹೊಸ ವಿಚಾರವಲ್ಲದಿದ್ದರೂ ಕಪ್ಪು, ನೀಲಿ, ಕಂದು ಬಣ್ಣಗಳ ವಜ್ರದ ಒಡವೆ ವಿನ್ಯಾಸಗಳು ಆಭರಣ ಜಗತ್ತಿನಲ್ಲಿ ತೀರಾ ಹೊಸ ಮತ್ತು ಇತ್ತೀಚಿಗಿನ ಪರಿಕಲ್ಪನೆ.

ನೀಲಿ, ಗುಲಾಬಿ, ಕಂದು, ಹಳದಿ, ಹಸುರು, ಕಪ್ಪು ಬಣ್ಣಗಳ ವಜ್ರದಾಭರಣ ವಿವಿಧ ವಿನ್ಯಾಸಗಳಲ್ಲಿ ಇದೀಗ ಸಿಗುತ್ತದೆ. ವಿವಿಧ ಶೈಲಿ, ಛಾಯೆಗಳಲ್ಲಿ ಸಿಗುವ ಈ ವಜ್ರಕ್ಕೆ ಹೆಸರುಗಳೂ ಹಲವಾರು. ಕಂದು ಬಣ್ಣದ ವಜ್ರಕ್ಕೆ 'ಕೊಗ್ನಾಕ್ ಡೈಮಂಡ್' ಎಂದು ಹೆಸರು. ನೀಲಿ ವಜ್ರಕ್ಕೆ 'ಹೋಪ್ ಡೈಮಂಡ್' ಹಳದಿ ವಜ್ರಕ್ಕೆ 'ಕ್ಯಾನರಿ ಡೈಮಂಡ್' ಎನ್ನುವರು.

ಇದೀಗ ನಿಮ್ಮ ಕಣ್ಣಿಗೆ, ಮನಸ್ಸಿಗೆ, ಉಡುಪಿಗೆ ಒಪ್ಪುವ ಬಣ್ಣ ಬಣ್ಣದ ವಜ್ರಗಳು ಬಂದಿವೆ. 'ಆಭರಣ ಜ್ಯುವೆಲ್ಲರಿ' ಈ ಬಣ್ಣದ ವಜ್ರದಾಭರಣವನ್ನು ಹೊಸದಾಗಿ ಪರಿಚಯಿಸಿದ್ದು, ಇದರಲ್ಲಿ ನಾನಾ ವಿನ್ಯಾಸದ ಒಡವೆಗಳು ಲಭ್ಯ.

ಮಧ್ಯಮ ವರ್ಗಕ್ಕೂ ಸೈ

ಒಡವೆಗಳು, ಅದರಲ್ಲೂ ವಜ್ರದ್ದು, ಚಿನ್ನದ್ದು, ಬೆಳ್ಳಿಯದ್ದು ಎಂದರೆ ಮಧ್ಯಮ ವರ್ಗದ ಮಹಿಳೆಯರ ಕಣ್ಣು ಸಹಜವಾಗಿಯೇ ಅರಳುತ್ತದೆ. ಚಿನ್ನದ ಬೆಲೆ ಗಗನಕ್ಕೇರಿರುವಾಗ ಇನ್ನು ವಜ್ರದ ಆಸೆ ಗಗನ ಕುಸುಮವೇ. ಮಧ್ಯಮ ವರ್ಗದ ಮಹಿಳೆಯರು ವಜ್ರದ ಆಭರಣ ಖರೀದಿಸಬೇಕಾದರೆ ಹರಸಾಹಸ ಪಡಬೇಕಾದದ್ದಂತೂ ಖಂಡಿತ. ಇದೀಗ ಬಂದಿರುವ ಹೊಸ ಬಗೆಯ ವಜ್ರದಾಭರಣ ಕೈಗೆಟಕುವ ಬೆಲೆಯಲ್ಲಿಯೂ ಲಭ್ಯವಿದೆ.

ಆಭರಣ ಜ್ಯುವೆಲ್ಲರಿ ಮಳಿಗೆ ಹೊರತಂದಿರುವ ಹೊಸ ವಿನ್ಯಾಸಗಳ 'ಕಲರ್ ಡೈಮಂಡ್ಸ್' ಸಂಗ್ರಹದಲ್ಲಿ ಕಫ್ಸ್, ಕಾಕ್‌ಟೈಲ್ ರಿಂಗ್, ಸ್ಟಡ್, ಪೆಂಡೆಂಟ್, ನೆಕ್ಲೆಸ್ ಮುಂತಾದ ಒಡವೆಗಳಿವೆ. ಬೆಲೆ 50 ಸಾವಿರ ರೂಪಾಯಿಗಳಿಂದ ಆರಂಭ.

ವಜ್ರದಾಭರಣಗಳಲ್ಲಿ ವಿಶೇಷವಾಗಿ ವಧುವಿನ ಆಭರಣಗಳಲ್ಲೂ ವೈವಿಧ್ಯತೆ ಇದೆ. ಕುಂದನ್, ಪೊಲ್ಕಿ, ಕೋಲ್ಕತ್ತಾ ಫಿಲಿಗ್ರಿ, ಡಿಸೈನರ್ ಆ್ಯಂಟಿಕ್, ರೂಬಿ, ಎಮರಾಲ್ಡ್, ರಾಜ್‌ಕೋಟ್ ಮತ್ತು ದೇವಾಲಯ ಆಭರಣಗಳ ವಿಶೇಷ ಸಂಗ್ರಹವೂ ಇದರಲ್ಲಿ ಸೇರಿದೆ.

ಹೊಸ ವಿನ್ಯಾಸ, ಹೊಸ ಶೈಲಿ ಜತೆಗೆ ಕಣ್ಸೆಳೆಯುವ ವಿವಿಧ ಬಣ್ಣಗಳಲ್ಲಿರುವ ಕಿವಿಯೋಲೆ, ಪೆಂಡೆಂಟ್, ಉಂಗುರ, ನೆಕ್ಲೆಸ್ ಖರೀದಿಸಿ. ದೀಪಾವಳಿ ಬೆಳಕಿನಲ್ಲಿ ಜರತಾರಿ ಸೀರೆ ಜತೆ ಕಣ್ಣು ಕೋರೈಸುವ ವಜ್ರದ ಒಡವೆ ಹಬ್ಬದ ಸಂಭ್ರಮವನ್ನು ಇಮ್ಮಡಿಸಲು ಸಹಕಾರಿಯಾಗುತ್ತದೆ. ■





